ಚಾಮನಹಳ್ಳಿ ಗ್ರಾಮವನ್ನು ಬನ್ನೂರು ಪುರಸಭೆಗೆ ಸೇರ್ಪಡಿಸುವುದು

21 (49) ಡಾ: ಮಹದೇವಪ್ಪ ಹೆಚ್.ಸಿ(ಟಿ.ನರಸೀಪುರ): ಮಾನ್ಯ ನಗರಾಭಿವೃದ್ಧಿ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಬನ್ನೂರು ಪುರಸಭೆಗೆ ಚಾಮನಹಳ್ಳಿ ಎಂಬ ಗ್ರಾಮವನ್ನು ಸೇರ್ಪಡೆ ಮಾಡುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಗ್ರಾಮವನ್ನು ಬನ್ನೂರು ಪುರಸಭೆಗೆ ಸೇರ್ಪಡೆ ಮಾಡಲು ಸಂಬಂಧಪಟ್ಟ ಸಚಿವರು ಎರಡು ಬಾರಿ ಆಶ್ವಾಸನೆ ನೀಡಿದ್ದರೂ, ಇದುವರೆಗೆ ಸೇರ್ಪಡೆಯಾಗದಿರುಲು ಕಾರಣವೇನು ಹಾಗೂ ಈ ವಿಳಂಬಕ್ಕೆ ಕಾರಣವೇನು;

ಇ) ಚಾಮನಹಳ್ಳಿ ಗ್ರಾಮವನ್ನು ಬನ್ನೂರು ಪುರಸಭೆಗೆ ಸೇರ್ಪಡೆ ಮಾಡಲು ಸರ್ಕಾರದ ಮಟ್ಟದಲ್ಲಿ ಪ್ರಸ್ತುತ ಯಾವ ಹಂತದಲ್ಲಿದೆ ಮತ್ತು ಸೇರ್ಪಡೆಗೆ ಎಷ್ಟು ಕಾಲಾವಕಾಶ ಬೇಕಾಗಬಹುದು?

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಬೆಂಗಳೂರು ಜಲಮಂಡಳಿ ಸಚಿವರು):

ಅ) ಹೌದು

ಆ,ಇ) ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 70 ಭೂದಪು 2009 ದಿನಾಂಕ:24–12–2009ರಲ್ಲಿ ಕರ್ನಾಟಕ ರಾಜ್ಯದಲ್ಲಿ 2011ರ ಜನಗಣತಿಯ ಕಾರ್ಯವು ಪ್ರಗತಿಯಲ್ಲಿರುವುದರಿಂದ ದಿನಾಂಕ:31–03–2011ರವರೆಗೆ ಯಾವುದೇ ಪ್ರದೇಶದ ವ್ಯಾಪ್ತಿಯನ್ನು ವಿಸ್ತರಿಸಲು ನಿರ್ಭಂದಿಸಲಾಗಿತ್ತು. ನಿರ್ದೇಶಕರು, ಜನಗಣತಿ ನಿರ್ದೇಶನಾಲಯ, ಕರ್ನಾಟಕ, ಬೆಂಗಳೂರು ಇವರು 2011ರ ಜನಗಣತಿಯ ಅಂಕಿ ಅಂಶವನ್ನು ಅಧಿಕೃತವಾಗಿ ಪ್ರಕಟಿಸಿದ ನಂತರ ಬನ್ನೂರು ಪುರಸಭೆಗೆ ಚಾಮನಹಳ್ಳಿ ಗ್ರಾಮವನ್ನು ಸೇರಿಸುವ ಬಗ್ಗೆ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3, 4, ಮತ್ತು 9 ರನ್ವಯ ಪರಿಶೀಲಿಸಲಾಗುವುದು.